## PERSONNEL AND ADMINISTRATIVE REFORMS SECRETAIAT

**NOTIFICATION**

**NO: DCA 01 ARB 2013, Bangalore, Dated: 24.07.2013**

In exercise of the powers conferred by clauses (2) and (3) of the Article 166 of the Constitution of India, the Governor of Karnataka hereby makes the following rules further to amend the Karnataka Government (Transaction of Business) Rules, 1977, namely :-

**1. Title and commencement :-** (1) These Rules may be called the Karnataka Government (Transaction of Business ) (Amendment) Rules, 2013.

(2) They shall come into force on the date of their publication in the official Gazette.

**2. Amendment of Second Schedule :-** In the Second Schedule to the Karnataka Government (Transaction of Business) Rules, 1977, in item 11 (e) and the entries thereof the following shall be substituted, namely-

**"11(e). Director General and Inspector General of Police, Director General of Police, Additional Director General of Police, Inspector General of Police and Deputy Inspector General of police"**

By Order and in the name of the Governor of Karnataka

**Dr. Mangala G.S.**
Under Secretary to Government
Department of Personnel and Administrative Reforms
(Service Rules-1)

# ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – IV-A | ಬೆಂಗಳೂರು, ಗುರುವಾರ, ಜುಲೈ ೨೫, ೨೦೧೩ (ಶ್ರಾವಣ ೩, ಶಕ ವರ್ಷ ೧೯೩೫) | ನಂ. ೯೭೪ |
| **Part – IV-A** | **Bangalore, Thursday, July 25, 2013 (Shravana 3, Shaka Varsha 1935)** | **No. 974** |

## KARNATAKA LEGISLATIVE ASSEMBLY SECRETARIAT

**NOTIFICATION**

**No. KLA/LGA/04/LA BILL/2013, Dated: 25th July 2013**

The following Bill was introduced in Legislative Assembly on 25-7-2013.

**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಮೊದಲನೇ ಅಧಿವೇಶನದ ಮುಂದುವರೆದ ಉಪವೇಶನ**

## ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ, 2013

**(2013ರ ವಿಧಾನಸಭೆಯ ವಿಧೇಯಕ ಸಂಖ್ಯೆ–04)**

ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

**(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.**

**2. 58ನೇ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 58ನೇ ಪ್ರಕರಣದಲ್ಲಿ (20)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(20-ಎ) ನಿಗಮದಲ್ಲಿ ನಿಹಿತವಾಗಿರುವ ಯಾವುವೇ ಬೀದಿಗಳು ಅಥವಾ ಸ್ವತ್ತಿನ ಕೆಳಗೆ, ಮೇಲೆ, ಉದ್ದಕ್ಕೂ, ಅಡ್ಡಕ್ಕೆ, ಒಳಗೆ ಅಥವಾ ಹೊರಗೆ ಹಾಕಲಾಗಿರುವ ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಒಳಗೊಂಡಂತೆ ಅನಧಿಕೃತ ಕೇಬಲ್ ಅನ್ನು ತೆಗೆದುಹಾಕುವುದು".

**3. 255ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 255ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ (ii)ನೇ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"(ii-ಎ) ಒಡೆಯ ಅಥವಾ ಸಂದರ್ಭಾನುಸಾರವಾಗಿ ಅಧಿಭೋಗದಾರರಿಂದ ಘನ ತ್ಯಾಜ್ಯದ ಸಂಗ್ರಹಣೆಗಾಗಿ ಅವಶ್ಯವಾದ ವ್ಯವಸ್ಥೆಯನ್ನು ಮಾಡುವುದು."**

4. 256ನೇ ಪ್ರಕರಣದ ತಿದ್ದುಪಡಿ.– **ಮೂಲ ಅಧಿನಿಯಮದ 256ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–**

"**256. ಅಧಿಭೋಗದಾರನಿಂದ ಕಸ ಮತ್ತು ಹೊಲಸಿನ ವಿಲೆಯನ್ನು ಆದೇಶ ಮಾಡುವ ಸಾರ್ವಜನಿಕ ನೋಟೀಸು.–** (1) ಕಮೀಷನರನು, ಸಾರ್ವಜನಿಕ ನೋಟೀಸಿನ ಮೂಲಕ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ನಗರದ ಯಾವುದೇ ಬೀದಿ ಅಥವಾ ವಿಭಾಗದಲ್ಲಿನ ಯಾವುದೇ ಆವರಣದಲ್ಲಿ ರಾಶಿಗೂಡುವ ಎಲ್ಲ ಕಸ ಮತ್ತು ಹೊಲಸನ್ನು ಅಂಥ ಆವರಣದ ಒಡೆಯ ಅಥವಾ ಅಧಿಭೋಗದಾರನು ಸಂಗ್ರಹಿಸತಕ್ಕದ್ದು ಮತ್ತು ಅದನ್ನು ಪ್ರತ್ಯೇಕಿಸಿದ ತರುವಾಯ, ಅದನ್ನು ಸಂಬಂಧಪಟ್ಟ ಘನತ್ಯಾಜ್ಯ ಸಂಗ್ರಹಕಾರರಿಗೆ ಕೊಡತಕ್ಕದ್ದು ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿಧಾನದಲ್ಲಿ ಅದನ್ನು ವಿಲೇ ಮಾಡತಕ್ಕದ್ದು ಎಂದು ನಿರ್ದೇಶಿಸಬಹುದು, ವಿವಿಧ ರೀತಿಯ ಘನ ತ್ಯಾಜ್ಯಗಳ ಸಂಬಂಧಲ್ಲಿ ವಿವಿಧ ವಿಧಾನವನ್ನು ನಿರ್ದಿಷ್ಟಪಡಿಸಬಹುದು.

(2) ಕಮೀಷನರನು, (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಯಾವುದೇ ನೋಟೀಸು ತತ್ಕಾಲದಲ್ಲಿ ಜಾರಿಯಲ್ಲಿಲ್ಲವೋ ಅಲ್ಲಿ ಘನತ್ಯಾಜ್ಯಗಳನ್ನು ಸಂಗ್ರಹಿಸುವಂತೆ ಮತ್ತು ಸೂಕ್ತ ಅಂತರಗಳಲ್ಲಿ ಹಾಗೂ ಸರಿಯಾದ ಮತ್ತು ಅನುಕೂಲಕರ ಜಾಗದಲ್ಲಿ ಅದನ್ನು ವಿಲೇ ಮಾಡುವಂತೆ ಮಾಡಬಹುದು ಮತ್ತು ಯಾವುವೇ ಆವರಣಗಳಲ್ಲಿ ರಾಶಿಗೂಡಿರುವ ಎಲ್ಲಾ ಕಸ ಮತ್ತು ಹೊಲಸನ್ನು ಪ್ರತ್ಯೇಕಿಸತಕ್ಕದ್ದು ಮತ್ತು ಕೊಡತಕ್ಕದ್ದು ಅಥವಾ ಈ ಬಗ್ಗೆ ರಚಿಸಲಾದ ಅಂಥ ನಿಯಮಗಳು ಅಥವಾ ಉಪವಿಧಿಗಳಿಗೆ ಅನುಸಾರವಾಗಿ ಅದನ್ನು ವಿಲೆ ಮಾಡತಕ್ಕದ್ದೆಂದು, ಸಾರ್ವಜನಿಕ ನೋಟೀಸಿನ ಮೂಲಕ, ನಿರ್ದೇಶಿಸಬಹುದು."

**5. 257ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 257ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

**"257. ಆವರಣದ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ರಾಶಿಗೂಡುವ ಕಸ ಅಥವಾ ಹೊಲಸನ್ನು ತೆಗೆದುಹಾಕುವುದು.–** ಕಮೀಷನರನ ಅಭಿಪ್ರಾಯದಲ್ಲಿ 256ನೇ ಪ್ರಕರಣದ ಅಡಿಯಲ್ಲಿ ಕೊಡಲಾದ ನೋಟೀಸಿನ ಮೂಲಕ ನಿರ್ದಿಷ್ಟಪಡಿಸಿದ ಯಾವುದೇ ವಿಧಾನಗಳಲ್ಲಿ ಪ್ರತ್ಯೇಕಿಸಬೇಕಾಗುವುದಕ್ಕಾಗಿ ಮತ್ತು ಶೇಖರಣೆ ಮಾಡುವುದಕ್ಕಾಗಿ ಅಥವಾ ಸಂಬಂಧಪಟ್ಟವರಿಗೆ ಕೊಟ್ಟುಬಿಡುವುದಕ್ಕಾಗಿ ಅತಿ ಗಣನೀಯವಾದ ಪ್ರಮಾಣಗಳಲ್ಲಿ ಆ ಕಸ ಅಥವಾ ಹೊಲಸು ಅಥವಾ ಯಾವುದೇ ಘನತ್ಯಾಜ್ಯವು ರಾಶಿಗೂಡುವ ಹಾಗೆ ಯಾವುದೇ ತಯಾರಿಕೆ, ವೃತ್ತಿ ಅಥವಾ ವ್ಯವಹಾರ ಅಥವಾ ಯಾವುದೇ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕಾಗಿ ಯಾವುದೇ ಆವರಣವನ್ನು ಉಪಯೋಗಿಸುತ್ತಿರುವಾಗ ಕಮೀಷನರನು,–

(ಎ) ಅಂಥ ಆವರಣದ ಒಡೆಯ ಅಥವಾ ಅಧಿಭೋಗದಾರನಿಗೆ ಅದರಲ್ಲಿ ರಾಶಿಗೂಡುವ ಎಲ್ಲ ಕಸ ಮತ್ತು ಹೊಲಸನ್ನು ಅಥವಾ ಪ್ರತ್ಯೇಕಿಸಿದ ತರುವಾಯ ಯಾವುದೇ ಘನತ್ಯಾಜ್ಯವನ್ನು ಸಂಗ್ರಹಿಸಲು ಮತ್ತು 255ನೇ ಪ್ರಕರಣದ ಅಡಿಯಲ್ಲಿ ಒದಗಿಸಿದ ಅಥವಾ ಗೊತ್ತುಪಡಿಸಿದ ಡಿಪೋ ಅಥವಾ ಸ್ಥಳಕ್ಕೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲಗಳಲ್ಲಿ, ಅಂಥ ಗಾಡಿಗಳು ಅಥವಾ ಸಂಪುಟಗಳಲ್ಲಿ ಮತ್ತು ಅಂಥ ಮಾರ್ಗಗಳ ಮೂಲಕ ಅದನ್ನು ಸಾಗಿಸಲು ನೋಟೀಸಿನ ಮೂಲಕ ಅಗತ್ಯಪಡಿಸಬಹುದು; ಅಥವಾ

(ಬಿ) ಅಂಥ ಒಡೆಯ ಅಥವಾ ಅಧಿಭೋಗದಾರನಿಗೆ ಅವನ ಉದ್ದೇಶದ ಬಗೆಗಿನ ನೋಟೀಸನ್ನು ಕೊಟ್ಟ ತರುವಾಯ ಅಂಥ ಆವರಣದಲ್ಲಿ ರಾಶಿಗೂಡಿದ ಎಲ್ಲ ಕಸ ಮತ್ತು ಹೊಲಸನ್ನು ಅಥವಾ ಘನತ್ಯಾಜ್ಯವನ್ನು ಪ್ರತ್ಯೇಕಿಸುವುದಕ್ಕಾಗಿ ಮತ್ತು ತೆಗೆದುಹಾಕುವುದಕ್ಕಾಗಿ ಸದರಿ ಒಡೆಯ ಅಥವಾ ಅಧಿಭೋಗದಾರನಿಗೆ (ಎ) ಖಂಡದ ಅಡಿಯಲ್ಲಿ ಕೊಟ್ಟ ನೋಟೀಸಿನಲ್ಲಿ ಸ್ಥಾಯೀ ಸಮಿತಿಯ ಮಂಜೂರಾತಿಯೊಂದಿಗೆ ನಿರ್ದಿಷ್ಟಪಡಿಸಬಹುದಾದ ನಿಯತಕಾಲಿಕ ಫೀಜನ್ನು ವಿಧಿಸಬಹುದು."

**6. 258ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 258ನೇ ಪ್ರಕರಣದ (ಬಿ) ಖಂಡದಲ್ಲಿ (ii)ನೇ ಉಪಖಂಡದಲ್ಲಿ "ಶೇಖರಣೆ ಮಾಡಿದ" ಎಂಬ ಪದಗಳಿಗೆ ಮೊದಲು "ಸಂಗ್ರಹಿಸಿದ ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

**7. 262ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 262ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಮೊದಲ ಅಪರಾಧ ನಿರ್ಣಯದ ದಿನಾಂಕದ ತರುವಾಯ ಅಂಥ ಅಪರಾಧವನ್ನು ಮುಂದುವರಿಸಿದಂಥ ಅಂಥ ಪ್ರತಿಯೊಂದು ದಿನಕ್ಕೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು (1)ನೇ ಉಪ–ಪ್ರಕರಣದ ಉಪಬಂಧಗಳ ಉಲ್ಲಂಘನೆಯ ಅಪರಾಧಕ್ಕಾಗಿ ಐದನೆಯ ಬಾರಿಗೆ ಯಾವೊಬ್ಬ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾದರೆ, ಅವನು ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು."

**8. 421ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 421ನೇ ಪ್ರಕರಣದ (5)ನೇ ಉಪಪ್ರಕರಣದಲ್ಲಿ "ಒಂದು ನೂರು ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಒಂದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**9. 423ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 423ನೇ ಪ್ರಕರಣದಲ್ಲಿ,–**

(ಎ) (7)ನೇ ಉಪಪ್ರಕರಣದಲ್ಲಿ (ಬಿ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಬಿಬಿ) ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಒಳಗೊಂಡಂತೆ ಯಾವುದೇ ಕೇಬಲ್ ಅನ್ನು ಹಾಕುವುದನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಅದರ ಷರತ್ತುಗಳನ್ನು ವಿಧಿಸುವುದಕ್ಕಾಗಿ ಹಾಗೂ ಹಾಗೆ ಹಾಕಲಾದ ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಒಳಗೊಂಡಂತೆ ಕೇಬಲ್ಲಿನ ಮೇಲೆ ಅಂಥ ಶುಲ್ಕಗಳನ್ನು ಅಥವಾ ವಾರ್ಷಿಕ ಟ್ರಾಕ್ ಬಾಡಿಗೆಯನ್ನು ವಿಧಿಸುವುದಕ್ಕಾಗಿ;"

(ಬಿ) (29)ನೇ ಉಪಪ್ರಕರಣದ ತರುವಾಯ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(30) ರಾಶಿಗೂಡಿದ ಘನತ್ಯಾಜ್ಯದ ಉತ್ಪಾದನೆ ಮತ್ತು ಜೈವಿಕ–ವೈದ್ಯಕೀಯ ಘನ ತ್ಯಾಜ್ಯವನ್ನು ಒಳಗೊಂಡಂತೆ ಘನತ್ಯಾಜ್ಯವನ್ನು ಪ್ರತ್ಯೇಕಿಸುವ ಮತ್ತು ವಿಲೆ ಮಾಡುವ ರೀತಿ ಮತ್ತು ಅದರ ಉಲ್ಲಂಘನೆಗೆ ದಂಡ."

**10. 424ನೇ ಪ್ರಕರಣದ ಪ್ರತಿಯೋಜನೆ.–** ಮೂಲ ಅಧಿನಿಯಮದ 424ನೇ ಪ್ರಕರಣಕ್ಕೆ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

**"424. ಕೆಲವು ಉಪವಿಧಿಗಳಿಗೆ ಪೂರ್ವಾನ್ವಯ ಪರಿಣಾಮವನ್ನು ಕೊಡಲು ಅಧಿಕಾರ ಮತ್ತು ಉಲ್ಲಂಘನೆಗಾಗಿ ದಂಡನೆಗಳು.–** (1) ಕಟ್ಟಡಗಳಿಗೆ ಮತ್ತು ಕಟ್ಟಡಗಳಿಗೆ ಸಂಬಂಧಿಸಿದಂತೆ ಶೌಚಗೃಹ, ಭೂ–ಶೌಚಗೃಹಗಳು ಕಕ್ಕಸುಗಳು, ಬೂದಿಗುಂಡಿಗಳು, ಘನತ್ಯಾಜ್ಯ ನಿರ್ವಹಣೆ ಮತ್ತು ರೊಚ್ಚುಗುಂಡಿಗಳ ಚರಂಡಿ ವ್ಯವಸ್ಥೆ ಮಟ್ಟಕ್ಕೆ ನೀರು ಸರಬರಾಜು ಮಾಡುವುದರ ಬಗ್ಗೆ ಮತ್ತು ನೀರು ಹರಿಸಿ ತೊಳೆಯುವುದಕ್ಕಾಗಿ ಶೌಚಗೃಹಗಳಿಗೆ ಸಾಕಷ್ಟು ನೀರು ಸರಬರಾಜು ಇಟ್ಟುಕೊಂಡು ಬರುವುದಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಉಪವಿಧಿಗಳನ್ನು ರಚಿಸುವುದಕ್ಕೆ ಮುಂಚೆ, ನಿರ್ಮಿಸಿದ ಕಟ್ಟಡಗಳಿಗೆ, ಪರಿಣಾಮಕಾರಿ ಆಗುವಂತೆ, ಉಪವಿಧಿಗಳನ್ನು ರಚಿಸಬಹುದು.

(2) 423ನೇ ಪ್ರಕರಣ ಮತ್ತು ಈ ಪ್ರಕರಣದ ಅಡಿಯಲ್ಲಿ ಯಾವುದೇ ಉಪವಿಧಿಯನ್ನು ರಚಿಸುವಾಗ, ನಿಗಮವು, ಅದರ ಉಲ್ಲಂಘನೆಯು.–

(ಎ) ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮುಂದುವರಿಯುತ್ತಿರುವ ಉಲ್ಲಂಘನೆ ಸಂದರ್ಭದಲ್ಲಿ, ಮೊದಲನೆಯ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಉಲ್ಲಂಘನೆ ಮುಂದುವರೆಯುವ ಅವಧಿಯಲ್ಲಿ ಪ್ರತಿ ದಿನಕ್ಕೆ ಮೂರು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ; ಅಥವಾ

(ಬಿ) ಅಂಥ ಉಲ್ಲಂಘನೆಯನ್ನು ಮುಂದುವರಿಸದಿರಲು ಕಮೀಷನರನಿಂದ ನೋಟೀಸನ್ನು ಸ್ವೀಕರಿಸಿದ ತರುವಾಯ ಉಲ್ಲಂಘನೆಯು ಮುಂದುವರಿಯುವ ಅವಧಿಯಲ್ಲಿ ಪ್ರತಿ ದಿನಕ್ಕೆ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕುದೆಂದು ಉಪಬಂಧಿಸಬಹುದು."

**11. 431ಎ ಮತ್ತು 431ಬಿ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 431ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**431 ಎ. ಘನತ್ಯಾಜ್ಯ ನಿರ್ವಹಣೆ ಸ್ಕೀಮನ್ನು ಪಾಲಿಸಲು ವಿಫಲವಾಗುವುದಕ್ಕೆ ದಂಡಗಳು.–** (1) ರಾಜ್ಯ ಸರ್ಕಾರವು ಹೊರಡಿಸಿದ ಯಾವುದೇ ಅಧಿಸೂಚನೆ, ನಿಗಮವು ರೂಪಿಸಿದ ಉಪವಿಧಿಗಳು, ಸ್ವಚ್ಛತೆ, ನೈರ್ಮಲ್ಯ, ಘನತ್ಯಾಜ್ಯಗಳ ನಿಭಾವಣೆ, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿಯನ್ನು ಖಚಿತಪಡಿಸುವ ರೀತಿಯ ಸಂಬಂಧದಲ್ಲಿ ಕಮೀಷನರನು ಅಥವಾ ಇತರ ಪ್ರಾಧಿಕಾರಿಯು ಹೊರಡಿಸಿದ ಆದೇಶ, ಸುತ್ತೋಲೆ ಅಥವಾ ಸಾರ್ವಜನಿಕ ಸೂಚನೆಯನ್ನು ಪಾಲಿಸುವುದು ಘನತ್ಯಾಜ್ಯವನ್ನು ಉತ್ಪಾದಿಸುವ ಪ್ರತಿಯೊಬ್ಬ ಮಾಲೀಕ ಅಥವಾ ಅಧಿಭೋಗದಾರನ ಕರ್ತವ್ಯವಾಗಿರತಕ್ಕದ್ದು.

(2) ಯಾವೊಬ್ಬ ವ್ಯಕ್ತಿಯು, (1)ನೇ ಉಪಪ್ರಕರಣದ ಉಪಬಂಧಗಳನ್ನು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಘನ ತ್ಯಾಜ್ಯ ನಿರ್ವಹಣೆ ಸ್ಕೀಮನ್ನು ಪಾಲಿಸಲು ವಿಫಲನಾಗಿದ್ದರೆ ಅಥವಾ ಪಾಲಿಸಲು ಅಡ್ಡಿಯಾಗಬಹುದಾದ, ಧಕ್ಕೆಯಾಗಬಹುದಾದ ಯಾವುದೇ ಕೃತ್ಯವನ್ನು ಮಾಡಿದ್ದರೆ ಅಥವ ಬಿಟ್ಟಿದ್ದರೆ ಅಥವಾ XIIIನೇ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಅಪರಾಧವೆಸಗಿದ್ದರೆ, ಆ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ XIIIನೇ ಅನುಸೂಚಿಯ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದಂಥ ಜುಲ್ಮಾನೆಯೊಂದಿಗೆ ದಂಡನೀಯನಾಗತಕ್ಕದ್ದು ಮತ್ತು ಅಪರಾಧವು ಮುಂದುವರೆದರೆ, ಅದರ (4)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡನೀಯನಾಗತಕ್ಕದ್ದು.

(3) ನಿಗಮವು, ಉಪವಿಧಿಯನ್ನು ರಚಿಸುವ ಮೂಲಕ, XIIIನೇ ಅನುಸೂಚಿಯಲ್ಲಿರುವ ಯಾವುವೇ ನಮೂದುಗಳನ್ನು ಮಾರ್ಪಡಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ, "ಘನತ್ಯಾಜ್ಯ ನಿರ್ವಹಣೆ ಸ್ಕೀಮು" ಎಂದರೆ, ಪರಿಸರ ಸಂರಕ್ಷಣಾ ಅಧಿನಿಯಮ, 1986ರ (1986ರ ಕೇಂದ್ರ ಅಧಿನಿಯಮ 29) ಅಡಿಯಲ್ಲಿ ಕೇಂದ್ರ ಸರ್ಕಾರವು ಹೊರಡಿಸಿದ ಪೌರಸಭಾ ಘನತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು, 2000 ಅಥವಾ ಪುರಸಭಾ ಘನತ್ಯಾಜ್ಯ ನಿರ್ವಹಣೆಗೆ ಅನ್ವಯವಾಗಬಹುದಾದಂಥ ಯಾವುದೇ ಇತರ ಉಪಬಂಧಗಳ ಅಡಿಯಲ್ಲಿ ನಮೂದಿಸಲಾದ ತನ್ನ ಹೊಣೆಗಾರಿಕೆಗಳನ್ನು ನಿರ್ವಹಿಸಲು ಪುರಸಭಾ ಘನತ್ಯಾಜ್ಯವನ್ನು ಪರಿಣಾಮಕಾರಿ ನಿಭಾವಣೆ, ಸಂಗ್ರಹಣೆ, ಸಾಗಣೆಯ ಉದ್ದೇಶಕ್ಕಾಗಿ ನಿಗಮವು ಕೈಗೊಳ್ಳುವ ಕ್ರಮಗಳ ಸರಣಿ."

**431ಬಿ. ಅಪರಾಧದ ರಾಜಿ.–** 432ಎ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು ಎಸಗಿರುವ ಅಥವಾ ಎಸಗಿನಿರುವನೆಂದು ಯುಕ್ತವಾಗಿ ಸಂದೇಹಿಸಲ್ಪಟ್ಟ ಯಾವೊಬ್ಬ ವ್ಯಕ್ತಿಯಿಂದ, ಕಮೀಷನರು ಪ್ರಾಧಿಕೃತಗೊಳಿಸಿದ ಗ್ರೂಪ್– ಬಿ ದರ್ಜೆಗೆ ಕಡಿಮೆಯಲ್ಲದ ಯಾವೊಬ್ಬ ಅಧಿಕಾರಿಯು, ಅಪರಾಧವನ್ನು ಎಸಗಿರುವಂಥ ಅಥವಾ ಅಪರಾಧ ಎಸಗಿರುವನೆಂದು ಯುಕ್ತವಾಗಿ ಸಂದೇಹಿಸಲ್ಪಟ್ಟಿರುವ ಅಪರಾಧಕ್ಕೆ ರಾಜಿ ರೂಪದಲ್ಲಿ XIIIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂಥ ಮೊಬಲಗು ಅಥವಾ ನಿಯಮಿಸಬಹುದಾದಂಥ ಯಾವುದೇ ಹಣದ ಮೊಬಲಗನ್ನು ಸ್ವೀಕರಿಸಬಹುದು ಮತ್ತು ಪ್ರಾಧಿಕೃತಗೊಳಿಸಿದ ಅಧಿಕಾರಿಗೆ ಅಂಥ ಮೊಬಲಗನ್ನು ಸಂದಾಯ ಮಾಡಿದ ನಂತರ ಅಂಥ ವ್ಯಕ್ತಿಯು ಅಭಿರಕ್ಷೆಯಲ್ಲಿದ್ದರೆ ಆತನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಅದೇ ಕೃತ್ಯದ ಸಂಬಂಧದಲ್ಲಿ ಅಂಥ ವ್ಯಕ್ತಿಯ ವಿರುದ್ಧ ಹೆಚ್ಚಿನ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ."

**12. XIನೇ ಅನುಸೂಚಿಯ ತಿದ್ದುಪಡಿ.–** ಮೂಲ ಅಧಿನಿಯಮದ XIನೇ ಅನುಸೂಚಿಯಲ್ಲಿ, 256(1), 256(2), 257(ಬಿ), 263(1),(2),(3),(4) ಮತ್ತು (5)ನೇ ಪ್ರಕರಣಗಳಿಗೆ ಸಂಬಂಧಪಟ್ಟ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**13. ಹೊಸ XIIIನೇ ಅನುಸೂಚಿಯ ಸೇರ್ಪಡೆ.–** ಮೂಲ ಅಧಿನಿಯಮದ XIIನೇ ಅನುಸೂಚಿಯ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"ಅನುಸೂಚಿ– XIII**

**(431ಎ ಪ್ರಕರಣವನ್ನು ನೋಡಿ)**

| ಕ್ರಮ ಸಂಖ್ಯೆ | ಮಾಡಿರುವ ಅಥವಾ ಬಿಟ್ಟಿರುವ ಕೃತ್ಯ | ಮೊದಲ ಅಪರಾಧಕ್ಕೆ ದಂಡ | ಎರಡನೇ ಮತ್ತು ತರುವಾಯದ ಅಪರಾಧಕ್ಕೆ ದಂಡ |
|---|---|---|---|
| 01 | ಕಸ ಹಾಕುವುದು, ಉಗಿಯುವುದು, ಮೂತ್ರ ವಿಸರ್ಜನೆ ಮಾಡುವುದು, ಬಯಲು ಪ್ರದೇಶದಲ್ಲಿ ಮಲ ವಿಸರ್ಜನೆ ಮಾಡುವುದು ಅಥವಾ ರಸ್ತೆ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಬೀದಿ, ಆಟದ ಮೈದಾನ, ಉದ್ಯಾನವನ ಮತ್ತು ಸಾರ್ವಜನಿಕ ಉಪಯುಕ್ತತೆಯ ಇತರ ಆವರಣಗಳಲ್ಲಿ ಇತರ ಉಪದ್ರವಕಾರಿ ಕೃತ್ಯಗಳನ್ನು ಎಸಗುವುದು. | 100/– ರೂಪಾಯಿಗಳು | 200/– ರೂಪಾಯಿಗಳು |
| 02 | ಕಾಲಕಾಲಕ್ಕೆ ಸಕ್ಷಮ ಪ್ರಾಧಿಕಾರವು ಹೊರಡಿಸುವ ಅಧಿಸೂಚನೆ, ಉಪವಿಧಿಗಳು ಸಾರ್ವಜನಿಕ ನೋಟೀಸು ಅಥವಾ ಸುತ್ತೋಲೆಯ ಅನುಸಾರವಾಗಿ ತ್ಯಾಜ್ಯವನ್ನು ಹಸಿ ತ್ಯಾಜ್ಯದಿಂದ ಒಣ ತ್ಯಾಜ್ಯವನ್ನು ಪ್ರತ್ಯೇಕಿಸಿ ಅದನ್ನು ಪ್ರತ್ಯೇಕವಾಗಿ ತ್ಯಾಜ್ಯ ಸಂಗ್ರಹಕಾರನಿಗೆ ನೀಡುವಲ್ಲಿ ವಿಫಲವಾಗುವ,<br>(i) ಯಾವೊಬ್ಬ ಗೃಹ ಅಧಿಭೋಗದಾರನಿಂದ<br>(ii) ಯಾವೊಬ್ಬ ರಾಶಿ ಕಸ ಉತ್ಪಾದಕ ಅಥವಾ ವಾಣಿಜ್ಯ ಸಂಕೀರ್ಣದಿಂದ | 100/– ರೂಪಾಯಿಗಳು<br>500/–ರೂಪಾಯಿಗಳು | 500/–ರೂಪಾಯಿಗಳು<br>1000/–ರೂಪಾಯಿಗಳು |
| 03 | ರಸ್ತೆ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಬೀದಿ, ಆಟದ ಮೈದಾನ, ಉದ್ಯಾನವನ ಮತ್ತು ಇತರ ಸಾರ್ವಜನಿಕ ಆವರಣಗಳಲ್ಲಿನ ಸ್ವಚ್ಛತೆ ಹಾಗೂ ನೈರ್ಮಲ್ಯತೆಯನ್ನು ಕಾಪಾಡಲು, ಕಮೀಷನರನು ಹೊರಡಿಸಿದ ಯಾವುದೇ ಕಾನೂನುಬದ್ಧ ನಿರ್ದೇಶನಗಳನ್ನು, ಪಾಲಿಸಲು ವಿಫಲವಾಗುವುದು | 100/– ರೂಪಾಯಿಗಳು | 200/–ರೂಪಾಯಿಗಳು |
| 04 | ನಿಗಮವು ನಿರ್ದಿಷ್ಟಪಡಿಸಿದ ರೀತಿಯಲ್ಲಿ ತ್ಯಾಜ್ಯಗಳನ್ನು ನಿಭಾಯಿಸುವ ಮತ್ತು ಸಾಗಿಸುವ ಉದ್ದೇಶಕ್ಕಾಗಿ ಉದ್ಯಾನವನ ತ್ಯಾಜ್ಯ, ಜಡತ್ಯಾಜ್ಯ (ಶುದ್ಧೀಕರಿಸಲಾಗದ), ನೈರ್ಮಲ್ಯ ಸಂಬಂಧಿ (ಸ್ಯಾನಿಟರಿ) ಜೈವಿಕವಾಗಿ ಕೊಳೆಯದಂಥ ಮತ್ತು ಜೈವಿಕ ವೈದ್ಯಕೀಯ ತ್ಯಾಜ್ಯ ಅಥವಾ ಯಾವುದೇ ಇತರ ವರ್ಗದ ತ್ಯಾಜ್ಯವನ್ನು ಪ್ರತ್ಯೇಕವಾಗಿ ನಿಗಮಕ್ಕೆ ನೀಡಲು ವಿಫಲವಾಗುವುದು | 500/–ರೂಪಾಯಿಗಳು | 1000/–ರೂಪಾಯಿಗಳು |
| 05 | ಕಸ ಅಥವಾ ಹೊಲಸು ಅಥವಾ ಯಾವುದೇ ಘನ ತ್ಯಾಜ್ಯವನ್ನು ಅನಿಯತವಾಗಿ ರಾಶಿಗೂಡಿಸುವುದು | 100/– ರೂಪಾಯಿಗಳು | 200/– ರೂಪಾಯಿಗಳು |
| 06 | ಬೀದಿಗಳಲ್ಲಿ ಹೊಲಸು ಹರಿಯುವುದಕ್ಕೆ ಅವಕಾಶ ನೀಡುವುದು | 100/– ರೂಪಾಯಿಗಳು | 200/– ರೂಪಾಯಿಗಳು |
| 07 | ಯುಕ್ತವಲ್ಲದ ಸ್ಥಳದಲ್ಲಿ ಸತ್ತ ಪ್ರಾಣಿಗಳನ್ನು ಅಥವಾ ಹೊಲಸನ್ನು ಹಾಕುವುದು | 100/– ರೂಪಾಯಿಗಳು | 200/– ರೂಪಾಯಿಗಳು |
| 08 | ಕಟ್ಟಡದ ತ್ಯಾಜ್ಯವನ್ನು ಅನಿಯತವಾಗಿ ಗುಡ್ಡೆ ಹಾಕುವುದು | 1000/– ರೂಪಾಯಿಗಳು | 5000/– ರೂಪಾಯಿಗಳು |

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

ರಾಜ್ಯದ ಎಲ್ಲಾ ನಗರ ಸಭೆಗಳು, ಅದರಲ್ಲೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಪ್ರದೇಶಗಳಲ್ಲಿ ಉತ್ಪಾದನೆಯಾತ್ತಿರುವ ಘನತ್ಯಾಜ್ಯವು ಅತೀ ಹೆಚ್ಚಾಗಿದೆ. ಈ ಘನ ತ್ಯಾಜ್ಯವನ್ನು ವೈಜ್ಞಾನಿಕ ವಿಧಾನದ ಮೂಲಕ ಮತ್ತು ಭಾರತ ಸರ್ಕಾರದ ಘನತ್ಯಾಜ್ಯಗಳ (ನಿಭಾವಣೆ ಮತ್ತು ನಿರ್ವಹಣೆ) ನಿಯಮಗಳು, 2000ದಲ್ಲಿ ಗೊತ್ತುಪಡಿಸಲಾದ ಮಾರ್ಗಸೂಚಿಗಳ ಅನ್ವಯ ವ್ಯವಸ್ಥಿತವಾಗಿ ವಿಲೇ ಮಾಡಬೇಕಾಗುತ್ತದೆ.

ಇತ್ತೀಚೆಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ ಘನತ್ಯಾಜ್ಯಗಳನ್ನು, ವೈಜ್ಞಾನಿಕವಾಗಿ ಮತ್ತು ಭಾರತ ಸರ್ಕಾರವು ರೂಪಿಸಿದ ನಿಯಮಗಳ ಅನುಸಾರವಾಗಿ ವಿಲೇವಾರಿ ಮಾಡಲಾಗುತ್ತಿಲ್ಲವೆಂದು ದೂರುವ ಮೂಲಕ, ಸರ್ಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶನಗಳನ್ನು ನೀಡಬೇಕೆಂದು ಕೋರಿ, ಹಲವು ಸಾರ್ವಜನಿಕ ಹಿತಾಸಕ್ತಿ ದಾವೆ ರಿಟ್ ಅರ್ಜಿಗಳನ್ನು ಕರ್ನಾಟಕದ ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಲಾಗಿದೆ ಮತ್ತು ಈ ಮೊಕದ್ದಮೆಗಳನ್ನು, ಘನ ನ್ಯಾಯಾಲಯವು ಈಗಲೂ ಆಲಿಸುತ್ತಿದೆ. ಘನ ನ್ಯಾಯಾಲಯವು, ಒಣ ಮತ್ತು ಹಸಿ ಕಸವನ್ನು ಬೇರ್ಪಡಿಸಲು ವಿಫಲವಾಗಿರುವ ಕುಟುಂಬಗಳಿಗೆ ದಂಡಗಳನ್ನು ವಿಧಿಸಲು 10.09.2012ರ ರಿಟ್ ಅರ್ಜಿ ಸಂಖ್ಯೆ: 24739–40/2012 ರಲ್ಲಿ ನಿರ್ದೇಶನಗಳನ್ನು ನೀಡಿದೆ.

ಆಪ್ಟಿಕಲ್ ಫೈಬರ್ಸ್ ಕೇಬಲ್‌ಗಳನ್ನು (OFC) ಹಾಕುವುದಕ್ಕೆ ಸಂಬಂಧಿಸಿದಂತೆ ನಿಗದಿಗೊಳಿಸಿರುವ ದರಗಳಿಗೆ ಬಿಬಿಎಂಪಿ ಪರಿಷತ್ತು ಕೈಗೊಂಡ ತೀರ್ಮಾನವನ್ನು ಪ್ರಶ್ನಿಸಿ, ಹಲವು ಓ.ಎಫ್.ಸಿ. ಏಜೆನ್ಸಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಂಖ್ಯೆ: 37882–37893/2011 ನ್ನು ಸಲ್ಲಿಸಿವೆ. ಘನ ಉಚ್ಚ ನ್ಯಾಯಾಲಯವು, ತನ್ನ ಆದೇಶ ದಿನಾಂಕ: 11.10.2012, ಇದರಲ್ಲಿ, ಓಎಫ್‌ಸಿ ಕೇಬಲ್‌ಗಳನ್ನು ಹಾಕುವ ಮತ್ತು ದರಗಳನ್ನು ನಿಗದಿಗೊಳಿಸುವ ಸಂಬಂಧದಲ್ಲಿ ನಿಯಮಗಳು ಮತ್ತು ವಿನಿಯಮಗಳನ್ನು ರೂಪಿಸಲು ನಿರ್ದೇಶನವನ್ನು ನೀಡಿದೆ. ಆದ್ದರಿಂದ ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ**

**ಖಂಡ 4:** ವಿಧೇಯಕದ 4ನೇ ಖಂಡದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಲಾದ 256ನೇ ಪ್ರಕರಣದ (2)ನೇ ಉಪಪ್ರಕರಣವು, ಯಾವುವೇ ಆವರಣಗಳಲ್ಲಿ ಅಧಿಭೋಗದಾರನು ಕಸ ಮತ್ತು ಹೊಲಸನ್ನು ಪ್ರತ್ಯೇಕಿಸುವ, ಕೊಡುವ ಅಥವಾ ವಿಲೇ ಮಾಡುವ ವಿಧಾನದ ಬಗ್ಗೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

**ಖಂಡ 11:** 11ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾಗಿರುವ 431ಬಿ ಪ್ರಕರಣವು, ರಾಜಿ ಮೊತ್ತ ಮತ್ತು ರಾಜಿಯಾಗಬೇಕಾದ ಒಟ್ಟು ಮೊತ್ತವನ್ನು ಸ್ವೀಕರಿಸುವ ವಿಧಾನದ ಬಗ್ಗೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ವಿನಯಕುಮಾರ್ ಸೊರಕೆ**
ನಗರಾಭಿವೃದ್ಧಿ ಸಚಿವರು

**ಪಿ. ಓಂಪ್ರಕಾಶ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

**ಅನುಬಂಧ**

**ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ 14) ಉದ್ಧೃತ ಭಾಗ**

XX XX XX

**58. ನಿಗಮದ ನಿರ್ಬಂಧಕ ಪ್ರಕಾರ್ಯಗಳು.–** XX XX XX

(20) ಬೀದಿಗಳು, ಸೇತುವೆಗಳು ಮತ್ತು ಇತರೆ ಸಾರ್ವಜನಿಕ ಸ್ಥಳಗಳಲ್ಲಿನ ಅಡೆತಡೆಗಳನ್ನು ಮತ್ತು ಮುನ್‌ಚಾಚುವಿಕೆಗಳನ್ನು ತೆಗೆದುಹಾಕುವುದು;

XX XX XX

**255. ಹೊಲಸನ್ನು ತೆಗೆದು ಹಾಕುವುದಕ್ಕಾಗಿನ ವ್ಯವಸ್ಥೆ.–** XX XX XX

(iii) ಕಸವನ್ನು ತಾತ್ಕಾಲಿಕವಾಗಿ ಶೇಖರಿಸುವುದಕ್ಕಾಗಿ ಕಸದ ತೊಟ್ಟಿಗಳನ್ನು ಒದಗಿಸತಕ್ಕದ್ದು;

XX XX XX

**256. ಅಧಿಭೋಗದಾರನಿಂದ ಕಸ ಮತ್ತು ಹೊಲಸಿನ ಶೇಖರಣೆಯ ಬಗ್ಗೆ ಆದೇಶಿಸಲು ಸಾರ್ವಜನಿಕ ನೋಟೀಸು.–** (1) ಕಮೀಷನರನು ಸಾರ್ವಜನಿಕ ನೋಟೀಸಿನ ಮೂಲಕ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ನಗರದ ಯಾವುದೇ ಬೀದಿ ಅಥವಾ ವಿಭಾಗದಲ್ಲಿನ ಯಾವುದೇ ಆವರಣದಲ್ಲಿ ರಾಶಿಗೂಡುವ ಎಲ್ಲ ಕಸ ಮತ್ತು ಹೊಲಸನ್ನು ಅಂಥ ಆವರಣದ ಒಡೆಯ ಅಥವಾ ಅಧಿಭೋಗದಾರನು ಸಂಗ್ರಹಿಸತಕ್ಕದ್ದು ಮತ್ತು ಅಂಥ ಒಡೆಯನು ಅಥವಾ ಅಧಿಭೋಗದಾರನು ಒದಗಿಸಬೇಕಾದ ಮತ್ತು ಆ ಆವರಣಗಳಲ್ಲಿ ಅಥವಾ ಅದರ ಹತ್ತಿರ ಇಟ್ಟ, ಅಂಥ ನೋಟೀಸನ್ನು ಹಾಕುವಂತೆ ನಿರ್ದಿಷ್ಟಪಡಿಸಿದ ಬಗೆಯ ಪೆಟ್ಟಿಗೆ ಅಥವಾ ಬುಟ್ಟಿ ಅಥವಾ ಇತರ ಸಂಪುಟದಲ್ಲಿ ಶೇಖರಿಸತಕ್ಕದ್ದು ಎಂದು ನಿರ್ದೇಶಿಸಬಹುದು.

(2) ಕಮೀಷನರನು, ಯಾವ ಬೀದಿ ಅಥವಾ ವಿಭಾಗಕ್ಕೆ ಸಂಬಂಧಿಸಿದಂತೆ (1)ನೇಯ ಉಪ–ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ನೋಟೀಸು ತತ್ಕಾಲದಲ್ಲಿ ಜಾರಿಯಲ್ಲಿಲ್ಲವೋ ಆ ಯಾವುದೇ ಬೀದಿ ಅಥವಾ ವಿಭಾಗದಲ್ಲಿ ಸೂಕ್ತ ಅಂತರಗಳಲ್ಲಿ ಮತ್ತು ಸರಿಯಾದ ಮತ್ತು ಅನುಕೂಲಕರ ಜಾಗದಲ್ಲಿ ಸಾರ್ವಜನಿಕ ಕಸದ ತೊಟ್ಟಿಗಳು ಅಥವಾ ಇತರ ಅನುಕೂಲಕರ ಸಂಪುಟಗಳನ್ನು ಒದಗಿಸಲಾಗುವಂತೆ ಮಾಡಬಹುದು ಮತ್ತು ಯಾವ ಆವರಣದ ಪ್ರವೇಶವು ಯಾವುದೇ ಅಂಥ ಸಂಪುಟದಿಂದ ಐವತ್ತು ಮೀಟರುಗಳ ಒಳಗೆ ಇದೆಯೋ ಆ ಯಾವುದೇ ಆವರಣದಲ್ಲಿ ರಾಶಿಗೂಡುವ ಎಲ್ಲ ಕಸ ಅಥವಾ ಹೊಲಸನ್ನು ಅಂಥ ಆವರಣದ ಒಡೆಯ ಅಥವಾ ಅಧಿಭೋಗದಾರನು ಸಂಗ್ರಹಿಸತಕ್ಕುದೆಂದು ಮತ್ತು ಅಂಥ ಸಂಪುಟದಲ್ಲಿ ಶೇಖರಿಸತಕ್ಕುದೆಂದು ಸಾರ್ವಜನಿಕ ನೋಟೀಸಿನ ಮೂಲಕ ನಿರ್ದೇಶಿಸಬಹುದು.

**257. ಆವರಣದ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ರಾಶಿಗೂಡುವ ಕಸ ಅಥವಾ ಹೊಲಸನ್ನು ತೆಗೆದುಹಾಕುವುದು.–** ಕಮೀಷನರನ ಅಭಿಪ್ರಾಯದಲ್ಲಿ 256ನೇ ಪ್ರಕರಣದ ಮೇರೆಗೆ ಕೊಡಲಾದ ನೋಟೀಸಿನ ಮೂಲಕ ನಿಯಮಿಸಿದ ಯಾವುದೇ ವಿಧಾನಗಳಲ್ಲಿ ಶೇಖರಣೆ ಮಾಡುವುದಕ್ಕಾಗಿ ಅತಿ

ಗಣನೀಯವಾದ ಪ್ರಮಾಣಗಳಲ್ಲಿ ಆ ಕಸ ಅಥವಾ ಹೊಲಸನ್ನು ರಾಶಿಗೂಡುವ ಹಾಗೆ ಯಾವುದೇ ತಯಾರಿಕೆ, ವೃತ್ತಿ ಅಥವಾ ವ್ಯವಹಾರ ಅಥವಾ ಯಾವುದೇ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕಾಗಿ ಯಾವುದೇ ಆವರಣವನ್ನು ಉಪಯೋಗಿಸುತ್ತಿರುವಾಗ ಕಮೀಷನರನು,–

(ಎ) ಅಂಥ ಆವರಣದ ಒಡೆಯ ಅಥವಾ ಅಧಿಭೋಗದಾರನಿಗೆ ಅದರಲ್ಲಿ ರಾಶಿಗೂಡುವ ಎಲ್ಲ ಕಸ ಮತ್ತು ಹೊಲಸನ್ನು ಸಂಗ್ರಹಿಸಲು ಮತ್ತು 255ನೇ ಪ್ರಕರಣದ ಮೇರೆಗೆ ಒದಗಿಸಿದ ಅಥವಾ ಗೊತ್ತು ಪಡಿಸಿದ ಡಿಪೋ ಅಥವಾ ಸ್ಥಳಕ್ಕೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲಗಳಲ್ಲಿ, ಅಂಥ ಗಾಡಿಗಳು ಅಥವಾ ಸಂಪುಟಗಳಲ್ಲಿ ಮತ್ತು ಅಂಥ ಮಾರ್ಗಗಳ ಮೂಲಕ ಅದನ್ನು ಸಾಗಿಸಲು ನೋಟೀಸಿನ ಮೂಲಕ ಅಗತ್ಯಪಡಿಸಬಹುದು; ಅಥವಾ

(ಬಿ) ಅಂಥ ಒಡೆಯ ಅಥವಾ ಅಧಿಭೋಗದಾರನಿಗೆ ಅವನ ಉದ್ದೇಶದ ಬಗೆಗಿನ ನೋಟೀಸನು ಕೊಟ್ಟ ತರುವಾಯ ಅಂಥ ಆವರಣದಲ್ಲಿ ರಾಶಿಗೂಡಿದ ಎಲ್ಲ ಕಸ ಮತ್ತು ಹೊಲಸನ್ನು ತೆಗೆದುಹಾಕುವುದಕ್ಕಾಗಿ ಸದರಿ ಒಡೆಯ ಅಥವಾ ಅಧಿಭೋಗದಾರನಿಗೆ (ಕ) ಖಂಡದ ಮೇರೆಗೆ ಕೊಟ್ಟ ನೋಟೀಸಿನಲ್ಲಿ ಸ್ಥಾಯೀ ಸಮಿತಿಯ ಮಂಜೂರಾತಿಯೊಂದಿಗೆ ನಿರ್ದಿಷ್ಟಪಡಿಸಬಹುದಾದ ನಿಯತಕಾಲಿಕ ಫೀಜನ್ನು ವಿಧಿಸಬಹುದು.

**258. ಪ್ರತಿನಿತ್ಯ ಬೀದಿಗಳನ್ನು ಸ್ವಚ್ಛಪಡಿಸಲು ಮತ್ತು ಕಸ ಮತ್ತು ಹೊಲಸನ್ನು ತೆಗೆದುಹಾಕುವುದಕ್ಕಾಗಿ ವ್ಯವಸ್ಥೆ.–** ಕಮೀಷನರನು,–

XX XX XX

(ಬಿ) (i) ಎಲ್ಲಾ ಸಂಪುಟಗಳ ಮತ್ತು ಡಿಪೋಗಳ ಒಳಗಿರುವ ವಸ್ತು ಮತ್ತು 255ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಸ್ತುಗಳ ತಾತ್ಕಾಲಿಕ ಶೇಖರಣೆಗಾಗಿ ಆ ಪ್ರಕರಣದ ಮೇರೆಗೆ ಅವನು ಒದಗಿಸಿದ ಅಥವಾ ಗೊತ್ತುಪಡಿಸಿದ ಎಲ್ಲ ಸ್ಥಳಗಳಲ್ಲಿ ರಾಶಿಗೊಂಡವುಗಳನ್ನು; ಮತ್ತು

(ii) 256ನೇ ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ನೋಟೀಸಿನ ಅನುಸರಣೆಯಲ್ಲಿ ಆವರಣದ ಒಡೆಯ ಅಥವಾ ಅಧಿಭೋಗದಾರನು ಶೇಖರಣೆ ಮಾಡಿದ ಎಲ್ಲ ವಸ್ತುಗಳನ್ನು ತೆಗೆದುಹಾಕುವುದಕ್ಕಾಗಿ,

– ವ್ಯವಸ್ಥೆ ಮಾಡತಕ್ಕದ್ದು.

XX XX XX

**262. ಮಲವನ್ನು ತಲೆಹೊರೆಯಾಗಿ ಹೊತ್ತುಕೊಂಡು ಹೋಗುವುದಕ್ಕಾಗಿ ವ್ಯಕ್ತಿಗಳನ್ನು ನಿಯೋಜಿಸಿಕೊಳ್ಳುವ ಪದ್ಧತಿಯ ನಿಷೇಧ.–** XXXX XX

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಮೊದಲ ಅಪರಾಧ ನಿರ್ಣಯದ ದಿನಾಂಕದ ತರುವಾಯ ಅಂಥ ಅಪರಾಧವನ್ನು ಮುಂದುವರಿಸಿದಂಥ ಅಂಥ ಪ್ರತಿಯೊಂದು ದಿನಕ್ಕೆ ಐದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು (1)ನೇ ಉಪ–ಪ್ರಕರಣದ ಉಪಬಂಧಗಳ ಉಲ್ಲಂಘನೆಯ ಅಪರಾಧಕ್ಕಾಗಿ ಐದನೆಯ ಬಾರಿಗೆ ಯಾವನೇ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾದರೆ, ಅವನು ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಮೂರುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

XX XX XX

**421. ಸರ್ಕಾರದ ನಿಯಮ ರಚನಾಧಿಕಾರ.–** XX XX XX

(5) ಯಾವುದೇ ನಿಯಮವನ್ನು ರಚಿಸುವಲ್ಲಿ ಸರ್ಕಾರವು, ಅದರ ಉಲ್ಲಂಘನೆಗೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕುದೆಂದು ಉಪಬಂಧಿಸಬಹುದು.

**423. ಉಪವಿಧಿಗಳ ರಚನಾಧಿಕಾರ.–** XX XX XX

(7) (ಎ) ಬೀದಿಗಳನ್ನು ರೂಪಿಸುವುದಕ್ಕಾಗಿ, ಬೀದಿಯನ್ನು ರೂಪಿಸಲು ಅನುಮತಿಗಾಗಿನ ಅರ್ಜಿಗಳೊಂದಿಗೆ ಒಪ್ಪಿಸಬೇಕಾಗಿ ಮಾಹಿತಿ ಮತ್ತು ನಕ್ಷೆಗಳನ್ನು ನಿರ್ಧರಿಸುವುದಕ್ಕಾಗಿ ಮತ್ತು ಸಾರ್ವಜನಿಕ ಬೀದಿಗಳ ಮಟ್ಟ ಮತ್ತು ಅಗಲವನ್ನು ಮತ್ತು ಅದರ ಮೇಲೆ ಲಗತ್ತಿಸಿರುವ ಕಟ್ಟಡಗಳ ಎತ್ತರವನ್ನು ನಿಯಂತ್ರಿಸುವುದಕ್ಕಾಗಿ;

(ಬಿ) ಸಾರ್ವಜನಿಕ ಬೀದಿಗಳ ಉಪಯೋಗವನ್ನು ಮತ್ತು ಅವುಗಳನ್ನು ಅಥವಾ ಅದರ ಭಾಗಗಳನ್ನು ಮುಚ್ಚುವುದನ್ನು ನಿಯಂತ್ರಿಸುವುದಕ್ಕಾಗಿ;

XX XX XX

(29) ಸಾಮಾನ್ಯವಾಗಿ, ಸ್ವಚ್ಛತೆ, ಸುರಕ್ಷೆ ಮತ್ತು ಸುವ್ಯವಸ್ಥೆ ಹಾಗೂ ಒಳ್ಳೆಯ ಆಡಳಿತವನ್ನು ಮತ್ತು ನಗರದ ಒಳಿತನ್ನು ಸುವ್ಯವಸ್ಥಿತಗೊಳಿಸುವುದಕ್ಕಾಗಿ ಹಾಗೂ ಅಧಿನಿಯಮದ ಎಲ್ಲಾ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ;

– ಉಪವಿಧಿಗಳನ್ನು ರಚಿಸಬಹುದು.

XX XX XX

**424. ಕೆಲವು ಉಪವಿಧಿಗಳಿಗೆ ಪೂರ್ವಾನ್ವಯ ಪರಿಣಾಮವನ್ನು ಕೊಡಲು ಅಧಿಕಾರ ಮತ್ತು ಉಲ್ಲಂಘನೆಗಾಗಿ ದಂಡನೆಗಳು.–** (1) ಕಟ್ಟಡಗಳಿಗೆ ಮತ್ತು ಕಟ್ಟಡಗಳಿಗೆ ಸಂಬಂಧಿಸಿದಂತೆ ಶೌಚಗೃಹ, ಭೂ–ಶೌಚಗೃಹಗಳು ಕಕ್ಕಸುಗಳು, ಬೂದಿಗುಂಡಿಗಳು ಮತ್ತು ರೊಚ್ಚುಗುಂಡಿಗಳ ಚರಂಡಿ ವ್ಯವಸ್ಥೆ ಮಟ್ಟಕ್ಕೆ ನೀರು ಸರಬರಾಜು ಮಾಡುವುದರ ಬಗ್ಗೆ ಮತ್ತು ನೀರು ಹರಿಸಿ ತೊಳೆಯುವುದಕ್ಕಾಗಿ ಶೌಚಗೃಹಗಳಿಗೆ ಸಾಕಷ್ಟು ನೀರು ಸರಬರಾಜು ಇಟ್ಟುಕೊಂಡು ಬರುವುದಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಉಪವಿಧಿಗಳನ್ನು ರಚಿಸುವುದಕ್ಕೆ ಮುಂಚೆ, ನಿರ್ಮಿಸಿದ ಕಟ್ಟಡಗಳಿಗೆ, ಪರಿಣಾಮಕಾರಿ ಆಗುವಂತೆ, ಉಪವಿಧಿಗಳನ್ನು ರಚಿಸಬಹುದು.

(2) 423ನೇ ಪ್ರಕರಣ ಮತ್ತು ಈ ಪ್ರಕರಣದ ಮೇರೆಗೆ ಯಾವುದೇ ಉಪವಿಧಿಯನ್ನು ರಚಿಸುವಾಗ, ನಿಗಮವು, ಅದರ ಉಲ್ಲಂಘನೆಯು.–

(ಎ) ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮುಂದುವರಿಯುತ್ತಿರುವ ಉಲ್ಲಂಘನೆ ಸಂದರ್ಭದಲ್ಲಿ, ಮೊದಲನೆಯ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಉಲ್ಲಂಘನೆ ಮುಂದುವರೆಯುವ ಅವಧಿಯಲ್ಲಿ ಪ್ರತಿ ದಿನಕ್ಕೆ ಹದಿನೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ; ಅಥವಾ

(ಬಿ) ಅಂಥ ಉಲ್ಲಂಘನೆಯನ್ನು ಮುಂದುವರಿಸದಿರಲು ಕಮೀಷನರನಿಂದ ನೋಟೀಸನ್ನು ಸ್ವೀಕರಿಸಿದ ತರುವಾಯ ಉಲ್ಲಂಘನೆಯು ಮುಂದುವರಿಯುವ ಅವಧಿಯಲ್ಲಿ ಪ್ರತಿ ದಿನಕ್ಕೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕುದೆಂದು ಉಪಬಂಧಿಸಬಹುದು.

XX XX XX

**ಅನುಸೂಚಿ – XI**

**ಸಾಮಾನ್ಯ ದಂಡಗಳು**

(431ನೇ ಪ್ರಕರಣವನ್ನು ನೋಡಿ)

| ಪ್ರಕರಣ ಅಥವಾ ನಿಯಮ | ಉಪ–ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| XX XX XX | | | |
| 256 | (1) | ನಿರ್ದೇಶನದಂತೆ ಕಸ ಮತ್ತು ಹೊಲಸನ್ನು ಸಂಗ್ರಹಿಸಲು ಮತ್ತು ಅವುಗಳನ್ನು ಸಾರ್ವಜನಿಕ ಸಂಪುಟದಲ್ಲಿ ಶೇಖರಿಸುವುದನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 256 | (2) | ನಿರ್ದೇಶನದಂತೆ ಅಧಿಭೋಗದಾರನು ಕಸ ಮತ್ತು ಹೊಲಸನ್ನು ಸಂಗ್ರಹಿಸಲು ಮತ್ತು ಆವರಣದಲ್ಲಿ ಅಥವಾ ಸಮೀಪದಲ್ಲಿ ತನ್ನದೇ ಆದ ಪೆಟ್ಟಿಗೆ ಅಥವಾ ಬುಟ್ಟಿ ಅಥವಾ ಇತರ ಸಂಪುಟದಲ್ಲಿ ಅವುಗಳನ್ನು ಶೇಖರಿಸುವುದನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 257 | (ಬಿ) | ವ್ಯಾಪಾರ ಆವರಣಗಳಲ್ಲಿ ರಾಶಿಗೂಡುವ ಕಸ ಮತ್ತು ಹೊಲಸನ್ನು ಸಂಗ್ರಹಿಸಲು ಮತ್ತು ಸ್ಥಳಾಂತರಿಸುವ ಬಗೆಗಿನ ನಿರ್ದೇಶನವನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 263 | (1) | ಇಪ್ಪತ್ತನಾಲ್ಕು ಗಂಟೆಗಳಿಗೂ ಮೀರಿ ಆವರಣದಲ್ಲಿ ಅಥವಾ ಹೊಲಸನ್ನು ರಾಶಿಗೂಡಲು ಅವಕಾಶ ಮಾಡಿಕೊಡುವುದು | ಇಪ್ಪತ್ತು ರೂಪಾಯಿಗಳು |
| | (2) | ಕಸ ಅಥವಾ ಹೊಲಸನ್ನು ಅಕ್ರಮವಾಗಿ ಶೇಖರಿಸುವುದು | ಹತ್ತು ರೂಪಾಯಿಗಳು |
| | (3) | ಪ್ರಾಣಿಗಳ ಶವಗಳು, ಕಸ ಅಥವಾ ಹೊಲಸನ್ನು ಸೂಕ್ತವಲ್ಲದ ಸ್ಥಳಗಳಲ್ಲಿ ಶೇಖರಿಸುವುದು | ಇಪ್ಪತ್ತು ರೂಪಾಯಿಗಳು |
| | (4) | ಕಸ ಅಥವಾ ಹೊಲಸನ್ನು ಇಪ್ಪತ್ತನಾಲ್ಕು ಗಂಟೆಗಳಿಗೂ ಮೀರಿ ಇಡುವುದು, ಇತ್ಯಾದಿ | ಹತ್ತು ರೂಪಾಯಿಗಳು |
| | (5) | ರಸ್ತೆಗಳಲ್ಲಿ ಹೊಲಸು ಹರಿಯಲು ಅವಕಾಶ ಮಾಡಿಕೊಡುವುದು | ಇಪ್ಪತ್ತು ರೂಪಾಯಿಗಳು |

XX XX XX

## KARNATAKA LEGISLATIVE ASSEMBLY
### FOURTEENTH LEGISLATIVE ASSEMBLY
### FIRST SESSION ADJOURNED MEETING

## THE KARNATAKA MUNICIPAL CORPORATIONS (AMENDMENT) BILL, 2013
### (L.A. BILL No. 04 of 2013)

A Bill further to amend the Karnataka Municipal Corporations Act, 1976.

Whereas it is expedient further to amend the Karnataka Municipal Corporations Act, 1976 (Karnataka Act 14 of 1977), for the purposes hereinafter appearing;

Be it enacted by the Karnataka State Legislature in the sixty-fourth year of the Republic of India as follows, namely:-

**1. Short title and commencement.-** (1) This Act may be called the Karnataka Municipal Corporations (Amendment) Act, 2013.

(2) It shall come into force at once.

**2. Amendment of section 58.-** In the Karnataka Municipal Corporations Act, 1976 (Karnataka Act 14 of 1977) (hereinafter referred to as the principal Act), in section 58, after sub-section (20), the following shall be inserted, namely:-

"(20-A) removal of unauthorized cable including Optical Fibre Cables laid under, over, along, the across, in or upon any streets or property vested in the corporation"

**3. Amendment of section 255.-** In section 255 of the Principal Act, in sub-section (1), after clause (ii), the following shall be inserted, namely:-

"(ii-a) make necessary arrangement for collection of solid waste from owners or occupiers as the case may be;"

**4. Substitution of section 256.-** For section 256 of the principal Act, the following shall be substituted, namely:-

**"256. Public notice ordering deposit of rubbish and filth by occupier.-** (1) The Commissioner may, by public notice, direct that all rubbish and filth accumulating in any premises in any street or quarter of the city specified in the notice shall be collected by the owner or occupier of such premises, and after segregating it, hand it over to the concerned collector of solid waste or dispose it in such manner as may be specified in the notification, different manner may be specified in respect of different kind of solid wastes.

(2) The Commissioner may cause solid wastes are collected and disposed at suitable intervals and in proper and convenient situation in respect of which no notice issued under sub-section (1) is for the time being in force, and may by public notice direct that all rubbish and filth accumulating in any premises, are segregated and handed over or disposed off in accordance with such rules or bye-law as may be made in this regard."

**5. Substitution of section 257.-** For section 257 of the principal Act, the following shall be substituted, namely:-

**"257. Removal of rubbish and filth accumulating in large quantities on premises.-** When any premises are used for carrying on any manufacture, trade or business or in any way so that rubbish or filth or any solid waste is accumulated in quantities which are, in the opinion of the Commissioner, too considerable to be segregated and deposited or handed over to concerned in any of the methods specified, by a notice issued under section 256, the Commissioner may,-

(a) by notice require the owner or occupier of such premises to collect all rubbish and filth or any solid waste after segregation accumulating thereon, and to remove the same at such times, in such carts or receptacles, and by such routes as may be specified in the notice to a depot or place provided or appointed under section 255; or

(b) after giving such owner or occupier notice of his intention, cause all rubbish and filth or solid waste accumulated in such premises to be segregated and removed and charge the said owner or occupier for such removal such periodical fee as may, with the sanction of the standing committee, be specified in the notice issued under clause (a)."

**6. Amendment of section 258.-** In section 258 of the principal Act, in clause (b), in sub-clause (ii), after the words "all things", the words "collected or" shall be inserted.

**7. Amendment of section 262.-** In section 262 of the principal Act, for sub-section (2), the following shall be substituted, namely:-

"(2) Any person who contravenes the provisions of sub-section (1) shall be punished with fine which may extend to five hundred rupees and with further fine which may extend to fifty rupees for every day on which such offence is continued, after the date of the first conviction and if any person is convicted for the fifth time of an offence for the contravention of the provisions of sub-section (1) he shall be punished with imprisonment for a term which may extend to three months or with fine which may extend to one thousand rupees, or with both."

**8. Amendment of section 421.-** In section 421 of the principal Act, in sub-section (5), for the words "one hundred rupees", the words "one thousand rupees" shall be substituted.

**9. Amendment of section 423.-** In section 423 of the principal Act,-

(a) In sub-section (7), after clause (b), the following shall be inserted, namely:-

"(bb) for the regulation of the laying of any cable including Optical Fibre Cables and imposing the conditions thereof and levying of such fees or annual track rent on the cable including Optical Fibre Cables so laid "

(b) after sub-section (29), the following shall be inserted, namely:-

"(30) manner of segregation and disposal of solid waste including bulk generation of solid waste and bio-medical solid waste and penalty for contravention of the same."

**10. Substitution of section 424.-** For section 424 of the principal Act, the following shall be substituted, namely:-

**"424. Power to give retrospective effect to certain bye-laws and penalties for breaches of bye-laws.-** (1) Bye-laws with regard to the drainage of, and supply of water to, buildings and water-closets, earth closets, privies, ash-pits, solid waste management and cess-pools in connection with buildings and the keeping of water-closets supplied with sufficient water for flushing may be made so as to affect buildings erected before the making of bye-laws under this Act.

(2) In making any bye-law under sections 423 and this section the corporation may provide that a breach thereof shall be punishable.-

(a) with fine which may extend to one thousand rupees, and in case of a continuing breach, with fine which may extend to three hundred rupees for every day during which the breach continues after conviction for the first breach, or

(b) with fine which may extend to two hundred rupees for every day during which the breach continues after receipt of notice from the Commissioner to discontinue such breach."

**11. Insertion of new section 431-A and 431B.-** After section 431 of the principal Act, the following shall be inserted, namely:-

**"431-A. Penalties for failure to comply with the Solid Waste Management Scheme.-** (1) It shall be the duty of every owner or occupier generating of solid waste to comply with any notification issued by the State Government, Bye-laws framed by the Corporation, Order, Circular or Public notice issued by the Commissioner or other authority regarding the manner of ensuring cleanliness, sanitation, handling, Transport, processing and disposal of Solid Wastes.

(2) Whoever commits any act of commission or omission which is likely to obstruct, impair or fails to comply with the provisions of sub-section (1) or the Solid Waste Management Scheme for the time being in force or commits any offence specified in column (2) of Schedule XIII shall on conviction be punished with fine as specified column (3) of the schedule XIII and on continued offence with fine as specified in column (4) thereof or which may extend to rupees one thousand.

(3) The Corporation may by making bye-law alter, amend or vary any of the entries in Schedule XIII.

**Explanation:-** For the purpose of this section "Solid Waste Management Scheme" means a series of measures taken by the Corporation for the purpose of effective handling, collection, transport, processing and disposal of Municipal Solid Wastes for discharge of its obligations enumerated under the Municipal Solid Wastes (Management and Handling) Rules, 2000 issued by the Central Government under the Environment Protection Act, 1986 (Central Act 29 of 1986) or any other provisions of law as may be applicable for management of Municipal Solid Wastes.

**431-B. Compounding of offence.-** Any officer authorized by the Commissioner not below the rank of Group-B officer may accept, in the prescribed manner, from any person who has committed or it reasonably suspected of having committed an offence punishable under sub-section (1) and (2) of section 432-A, such sum of money specified in Schedule XIII or any sum of money as may be prescribed, by way of composition of the offence which such person has committed or is reasonably suspected of having committed and on the payment of such sum of money to the authorized officer such person, if in custody, shall be set at liberty and no further proceedings shall be taken against such person with reference to the same act."

**12. Amendment of Schedule XI.-** In Schedule XI to the principal Act, entries pertaining to sections 256(1), 256(2), 257(b), 263 (1), (2), (3), (4) and (5) shall be omitted.

**13. Insertion of new Schedule XIII.-** After Schedule XII of the principal Act, the following shall be inserted, namely:-

**"Schedule-XIII**
**(see section 431 –A)**

| Sl. No. | Act of Commission or Omission | Penalty for the first offence | Penalty for the second and subsequent offence |
|---|---|---|---|
| 01 | Littering, spitting, urinating, open defecating or committing other acts of nuisance on Road, Bus Station, Railway Station, Street, Playground, Park and other Premises of Public Utility. | Rs. 100/- | Rs. 200/- |
| 02 | Failure to segregate Dry Waste from Wet Waste and hand over the same separately to collector of waste in accordance with the Notification, Bye-laws, Public Notice or circular issued by the competent authority from time to time.<br>(i) by any domestic occupier<br>(ii) by any bulk Generator or commercial complex | Rs. 100/-<br>Rs. 500/- | Rs. 500/-<br>Rs. 1000/- |

| Sl. No. | Act of Commission or Omission | Penalty for the first offence | Penalty for the second and subsequent offence |
|---|---|---|---|
| 03 | Failure to comply with any lawful directions issued by the Commissioner to ensure cleanliness and hygiene of Road, Bus Station, Railway Station, Street, Playground, Park and other Premises of Public utility. | Rs. 100/- | Rs. 200/- |
| 04 | Failure to segregate and hand over garden waste, inert waste, sanitary, non-Bio degradable and Bio-medical waste or any other category Waste separately to the Corporation for the purpose of handling and transportation of the Wastes in the manner specified by the Corporation. | Rs. 500/- | Rs. 1000/- |
| 05 | Irregular deposit of rubbish or filth or any solid waste | Rs.100/- | Rs.200/- |
| 06 | Allowing filth to flow in streets | Rs.100/- | Rs.200/- |
| 07 | Depositing carcasses of animals or filth in improper place | Rs.100/- | Rs.200/- |
| 08 | Dumping of building waste irregularly | Rs.1000/- | Rs.5000/- |

## STATEMENT OF OBJECTS AND REASONS

The solid wastes generated by All the City Corporations of the State specially in Bruhat Bangalore Mahanagara Palike (BBMP) is vey high. These solid wastes has to be disposed systematically through scientific manner and as per the guidelines prescribed in Solid Wastes (Handling & Management) Rules, 2000 by the Government of India.

Recently, several Public Interest Litigation Writ Petitions have been filed before the High Court of Karnataka complaining that the solid wastes generated in B.B.M.P. areas not disposed scientifically and as per the rules made by the Government of India and praying to issue directions to Government and B.B.M.P. and these cases are being heard by the Hon'ble Court even now. The directions given by the Hon'ble Court in W.P.No. 24739-40/2012 on 10.09.2012 for imposition of fines of house holds which are failing to segregate into dry and wet garbage.

Questioning the decision taken by the B.B.M.P Council for fixing rates for laying Optical Fibers Cables (OFC), several O.F.C agencies have filed W.P.No. 37882-37893/2011 before the High Court of Karnataka. The Hon'ble High Court in its order dated 11.10.2012 has directed to frame Rules and Regulations with regard to laying of O.F.C. Cables and fixing of rates. Therefore, it is considered necessary to amend the Karnataka Municipal Corporations Act, 1976. (Karnataka Act 14 of 1977)

Hence the Bill

## FINANCIAL MEMORANDUM

There is no extra expenditure involved in the proposed Legislative Measure.

## MEMORANDUM REGARDING DELEGATED LEGISLATION

**Clause 4.-** Section 256 as sought to be substituted by clause 4 of the Bill, sub-section (2), empowers the State Government to make rules regarding the manner of segregation, handing over or disposal of rubbish and filth by occupier in any premises.

**Clause 11.-** Section 431-B as sought to be inserted by clause 11, empowers the State Government to make rules regarding the manner of accepting the compounded amount and the sum of money to be compounded.

The proposed delegation of legislative power is normal in character.

**VINAYKUMAR SORAKE**
Minister for Urban Development

**P. OMPRAKASHA**
Secretary
Karnataka Legislative Assembly

**ANNEXURE**

**EXTRACT FROM THE KARNATAKA MUNICIPAL CORPORATIONS ACT, 1976. (KARNATAKA ACT 14 OF 1977)**

**XX XX XX**

**58. Obligatory functions of the Corporations.-** XX XX XX

(20) the removal of obstructions and projections in or upon streets, bridges and other public places;

XX XX XX

**255. Provision for removal of filth.-** XX XX XX

(iii) provide dust-bins for the temporary deposit of rubbish;

XX XX XX

**256. Public notice ordering deposit of rubbish and filth by occupier.-** (1) The Commissioner may, by public notice, direct that all rubbish and filth accumulating in any premises in any street or quarter of the city specified in the notice shall be collected by the owner or occupier of such premises, and deposited in a box or basket or other receptacle of the kind specified in such notice to be provided by such owner or occupier and kept at or near the premises.

(2) The Commissioner may cause public dustbins or other convenient receptacles to be provided at suitable intervals and in proper and convenient situation in any street or quarter in respect of which no notice issued under sub-section (1) is for the time being in force, and may by public notice direct that all rubbish and filth accumulating in any premises, the entrance to which is situated within fifty metres of any such receptacle shall be collected by the owner or occupier of such premises and deposited in such receptacle.

**257. Removal of rubbish and filth accumulating in large quantities on premises.-** When any premises are used for carrying on any manufacture, trade or business or in any way so that rubbish or filth is accumulated in quantities which are, in the opinion of the Commissioner, too considerable to be deposited in any of the methods prescribed, by a notice issued under section 256, the Commissioner may,-

(a) by notice require the owner or occupier of such premises to collect all rubbish and filth accumulating thereon, and to remove the same at such times, in such carts or receptacles, and by such routes as may be specified in the notice to a depot or place provided or appointed under section 255; or

(b) after giving such owner or occupier notice of his intention, cause all rubbish and filth accumulated in such premises to be removed, and charge the said owner or occupier for such removal such periodical fee as may, with the sanction of the standing committee, be specified in the notice issued under clause (a).

**258. Provision for daily cleaning of streets and removal of rubbish and filth.-** **XX**
**XX XX**

(b) for the removal of,-

(i) the contents of all receptacles and depots and the accumulations at all places provided or appointed by him under section 255 for the temporary deposit of any of the things specified therein, and

(ii) all things deposited by owners or occupiers of premises in pursuance of any notice issued under section 256.

**XX XX XX**

**262. Prohibition of the practice of employing persons for carrying night soil as head-load.-** XX
XX XX

(2) Any person who contravenes the provisions of sub-section (1) shall be punished with fine which may extend to twenty-five rupees and with further fine which may extend to five rupees for every day on which such offence is continued, after the date of the first conviction and if any person is convicted for the fifth time of an offence for the contravention of the provisions of sub-section (1) he shall be punished with imprisonment for a term which may extend to three months or with fine which may extend to three hundred rupees, or with both.

XX XX XX

**421. Power of Government to make rules.-** XX XX

(5) In making any rule, the Government may provide that a breach thereof shall be punishable with fine which may extend to one hundred rupees.

**423. Power to make bye-laws.-** XX XX XX

( 7) (a) for the laying out of streets, for determining the information and plans to be submitted with applications for permission to layout street; and for regulating the level and width of public streets and the height of buildings abutting thereon;

(b) for the regulation of the use of public streets, and the closing thereof or part thereof;

XX XX XX

(29) in general, for securing cleanliness, safety and order and the good governance and well being of the city and for carrying out all the purposes of this Act.

**424. Power to give retrospective effect to certain bye-laws and penalties for breaches of bye-laws.-** (1) Bye-laws with regard to the drainage of, and supply of water to, buildings and water-closets, earth closets, privies, ash-pits and cess-pools in connection with buildings and the keeping of water-closets supplied with sufficient water for flushing may be made so as to affect buildings erected before the making of bye-laws under this Act.

(2) In making any bye-law under sections 423 and this section the corporation may provide that a breach thereof shall be punishable.- (a) with fine which may extend to fifty rupees, and in case of a continuing breach, with fine which may extend to fifteen rupees for every day during which the breach continues after conviction for the first breach, or (b) with fine which may extend to ten rupees for every day during which the breach continues after receipt of notice from the Commissioner to discontinue such breach.

XX XX XX

**SCHEDULE - XI**
**ORDINARY PENALTIES**
*(See section 431)*

| Section or rule | Sub-Section or Clause | Subject | Fine which may be imposed |
|---|---|---|---|
| XX | XX | XX | |
| 256 | (1) | Failure to comply with direction to collect rubbish and filth and deposit them in public receptacle | Ten rupees |
| 256 | (2) | Failure of occupier to comply with direction to collect rubbish and filth and deposit them in a box or basket or other receptable of his own at or near premises | Ten rupees |
| 257 | (b) | Failure to comply with direction to Ten rupees collect and remove rubbish and filth accumulating on business premises. | Ten rupees |
| 263 | (1) | Allowing rubbish or filth to accumulate on premises for more than twenty- four hours | Twenty rupees |
| | (2) | Irregular deposit of rubbish or filth | Ten rupees |
| | (3) | Depositing carcasses of animals or filth in improper places | Twenty rupees |
| | (4) | Keeping rubbish or filth for more than twenty-four hours, etc. | Ten rupees |
| | (5) | Allowing filth to flow in streets | Twenty rupees |

XX XX XX

# ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – IV-A | ಬೆಂಗಳೂರು, ಗುರುವಾರ, ಜುಲೈ ೨೫, ೨೦೧೩ (ಶ್ರಾವಣ ೩, ಶಕ ವರ್ಷ ೧೯೩೫) | ನಂ.೯೭೫ |
| Part – IV-A | Bangalore, Thursday, July 25, 2013 (Shravana 3, Shaka Varsha 1935) | No. 975 |


## KARNATAKA LEGISLATIVE ASSEMBLY SECRETARIAT

## NOTIFICATION

**No. KLA/LGA/09/LA BILL/2013, Bangalore, Dated: 25th July 2013**

The following Bill was introduced in Legislative Assembly on 25-7-2013.

**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಮೊದಲನೇ ಅಧಿವೇಶನ ಮುಂದುವರೆದ ಉಪವೇಶನ**

## ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ, 2013

## (2013ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 09)

ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಅಧಿನಿಯಮ, 1994ನ್ನು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಅಧಿನಿಯಮ, 1994ನ್ನು (1994ರ ಕರ್ನಾಟಕ ಅಧಿನಿಯಮ 35) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **45ನೇ ಪ್ರಕರಣವನ್ನು ಬಿಟ್ಟುಬಿಡುವುದು.–** ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಅಧಿನಿಯಮ, 1994ರ (1994ರ ಕರ್ನಾಟಕ ಅಧಿನಿಯಮ 35) 45ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

### ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಭಾರತ ಸಂವಿಧಾನದ 243ಜೆಡ್ ಇ ಅನುಚ್ಛೇದದ ಅಡಿಯಲ್ಲಿ ಮಹಾನಗರ ಯೋಜನಾ ಸಮಿತಿಯನ್ನು ರಚಿಸುವುದು ಅವಶ್ಯಕವಾಗಿದೆ. ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಅಧಿನಿಯಮ, 1994ರಲ್ಲಿ (1994ರ ಕರ್ನಾಟಕ ಅಧಿನಿಯಮ 35) ಸದರಿ ಸಮಿತಿಯು ರಚನೆಯಾಗಿದ್ದು, ಮಹಾನಗರ ಯೋಜನಾ ಸಮಿತಿಯ ರಚನೆಯ ಪರಿಣಾಮವಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ರ (1985ರ ಕರ್ನಾಟಕ ಅಧಿನಿಯಮ 39) ನಿರಸನಕ್ಕಾಗಿ ಸದರಿ ತಿದ್ದುಪಡಿ ಅಧಿನಿಯಮದ 45ನೇ ಪ್ರಕರಣವು ಅವಕಾಶವನ್ನು ಕಲ್ಪಿಸುತ್ತದೆ.

ಆದ್ದರಿಂದ, ಮಹಾನಗರ ಯೋಜನಾ ಸಮಿತಿಯ ರಚನೆಯ ತರುವಾಯವೂ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ನ್ನು ಉಳಿಸಿಕೊಳ್ಳುವುದಕ್ಕಾಗಿ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಅಧಿನಿಯಮ, 1994ರ 45ನೇ ಪ್ರಕರಣವನ್ನು ಬಿಟ್ಟುಬಿಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

### ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

**ಪಿ. ಓಂಪ್ರಕಾಶ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

**ಅನುಬಂಧ**

**ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಅಧಿನಿಯಮ, 1994ರ (1994ರ ಕರ್ನಾಟಕ ಅಧಿನಿಯಮ 35) ಉದ್ಧೃತ ಭಾಗ**

XX XX XX

**45. ಮಹಾನಗರ ಯೋಜನಾ ಸಮಿತಿಯ ರಚನೆಯ ಪರಿಣಾಮಗಳು.–** (1) 503ಬಿ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಬೆಂಗಳೂರು ಮಹಾನಗರ ಯೋಜನಾ ಸಮಿತಿಯು ರಚನೆಯಾದ ಮೇಲೆ 1985ರ ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮವು (1985ರ ಕರ್ನಾಟಕ ಅಧಿನಿಯಮ 39) ನಿರಸಿತಗೊಳ್ಳತಕ್ಕದ್ದು;

(2) ಹಾಗೆ ನಿರಸನವಾದ ಮೇಲೆ, ನಿರಸಿತ ಅಧಿನಿಯಮದ ಮೇರೆಗೆ ರಚಿತವಾದ ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರವು ವಿಘಟಿತಗೊಳ್ಳತಕ್ಕದ್ದು.

(3) (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, (1)ನೇ ಉಪಪ್ರಕರಣದಲ್ಲಿರುವುದಾವುದೂ,–

(ಎ) ಸದರಿ ಅಧಿನಿಯಮಿತಿಗಳ ಪೂರ್ವಪ್ರವರ್ತನೆಯನ್ನು ಅಥವಾ ಅವುಗಳ ಮೇರೆಗೆ ಮಾಡಿದ ಅಥವಾ ಮಾಡಲು ಎಡೆಗೊಟ್ಟ ಯಾವುದೇ ಕಾರ್ಯವನ್ನೂ ಬಾಧಿಸತಕ್ಕದ್ದಲ್ಲ; ಅಥವಾ

(ಬಿ) ಸದರಿ ಅಧಿನಿಯಮಿತಿಗಳ ಮೇರೆಗೆ ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಸಿ) ಸದರಿ ಅಧಿನಿಯಮಿತಿಗಳ ವಿರುದ್ಧವಾಗಿ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಡಿ) ಹಿಂದೆ ಹೇಳಿದಂತಹ ಯಾವುದೇ ಅಂಥ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ಮುಟ್ಟುಗೋಲು ಅಥವಾ ದಂಡನೆಗೆ ಸಂಬಂಧಿಸಿದಂತೆ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಬಾಧಿಸತಕ್ಕದ್ದಲ್ಲ,

ಮತ್ತು ಸದರಿ ಅಧಿನಿಯಮಿತಿಯನ್ನು ನಿರಸಿತಗೊಳಿಸದಿದ್ದರೆ ಹೇಗೋ ಹಾಗೆ ಅಂಥ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಅಥವಾ ಅಂಥ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆಯನ್ನು ವಿಧಿಸಬಹುದು.

(4) ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನೌಕರರ ವರ್ಗಗಳ ಹೊರತು ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರದ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರನು ಬೆಂಗಳೂರು ಮಹಾನಗರ ಯೋಜನಾ ಸಮಿತಿಯ ಉದ್ಯೋಗಿಗಳಾಗತಕ್ಕದ್ದು ಮತ್ತು ಇತರ ಉಪಬಂಧಗಳನ್ನು ಕಲ್ಪಿಸುವವರೆಗೆ ಬೆಂಗಳೂರು ಮಹಾನಗರ ಯೋಜನಾ ಸಮಿತಿಯ ರಚನೆಯಾಗುವುದಕ್ಕೆ ನಿಕಟಪೂರ್ವದಲ್ಲಿ ಅವರು ಹಕ್ಕುಳ್ಳವರಾಗಿದ್ದ ವೇತನ, ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಅಂಥ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(5) ಬೆಂಗಳೂರು ಮಹಾನಗರ ಯೋಜನಾ ಸಮಿತಿಯು ರಚನೆಯಾದ ದಿನಾಂಕದ ನಿಕಟಪೂರ್ವದಲ್ಲಿ ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರದ ಎಲ್ಲಾ ಆಸ್ತಿಗಳು ಮತ್ತು ಹೊಣೆಗಳು ಮತ್ತು ಆ ದಿನಾಂಕದಂದು ಅಸ್ತಿತ್ವದಲ್ಲಿದ್ದು, ಅದರಿಂದ ಅಥವಾ ಅದರ ಪರವಾಗಿ ಮಾಡಲಾದ ಎಲ್ಲಾ ಕರಾರುಗಳೂ ಬೆಂಗಳೂರು ಮಹಾನಗರ ಯೋಜನಾ ಸಮಿತಿಗೆ ವರ್ಗಾವಣೆಯಾಗತಕ್ಕದ್ದು.

XX XX XX

## KARNATAKA LEGISLATIVE ASSEMBLY
## FOURTEENTH LEGISLATIVE ASSEMBLY
## FIRST SESSION ADJOURNED MEETING

# THE KARNATAKA MUNICIPAL CORPORATIONS (AMENDMENT) BILL, 2013
## (L.A. Bill No. 09 of 2013)

A Bill to amend the Karnataka Municipal Corporations (Amendment) Act, 1994.

Whereas it is expedient to amend the Karnataka Municipal Corporations (Amendment) Act, 1994 (Karnataka Act 35 of 1994), for the purposes hereinafter appearing;

Be it enacted by the Karnataka State Legislature in the sixty-fourth year of the Republic of India as follows, namely:-

**1. Short title and commencement.-** (1) This Act may be called the Karnataka Municipal Corporations (Amendment) Act, 2013.

(2) It shall come into force at once.

**2. Omission of section 45.-** In the Karnataka Municipal Corporations (Amendment) Act, 1994 (Karnataka Act 35 of 1994), section 45 shall be omitted.

**STATEMENT OF OBJECTS AND REASONS**

It is necessary to constitute Metropolitan Planning Committee under Article 243ZE of the Constitution of India . The said Committee was constituted in the Karnataka Municipal Corporation (Amendment) Act, 1994 (Karnataka Act 35 of 1994) whereas section 45 of the said Amendment Act provides for repeal of the Bangalore Metropolitan Area Development Authority Act, 1985 (Karnataka Act 39 of 1985) consequent upon Constitution of Metropolitan Planning Committee.

Therefore, it is considered necessary to retain the Bangalore Metropolitan Area Development Authority Act, 1985 even after Constitution of the Metropolitan Planning Committee and also to omit section 45 of the Karnataka Municipal Corporation (Amendment) Act, 1994.

Hence the Bill,

**FINANCIAL MEMORANDUM**

There is no extra Expenditure involved in the proposed Legislative Measure.

**SIDDARAMAIAH**
Chief Minister

**P. OMPRAKASHA**
Secretary
Karnataka Legislative Assembly

**ANNEXURE**

**Extract from the Karnataka Municipal Corporations (Amendment) Act, 1994 (Karnataka Act 35 of 1994)**

**xxx** **xxx** **xxx**

**45. Consequences of Constitution of Metropolitan Planning Committee:-** (1) On the Constitution of Bangalore Metropolitan Planning Committee under sub-section (1) of section 503B, the Bangalore Metropolitan Region Development Authority Act, 1985 (Karnataka Act 39 of 1985) shall stand repealed.

(2) On such repeal the Bangalore Metropolitan Region Development Authority constituted under the repealed Act shall stand desolved.

(3) Subject to the provisions of sub-section (2) nothing in sub-section (1) shall affect,

(a) the previous operation of the said enactment or anything done or sufferred thereunder; or

(b) any right, previlege, obligation or liability of accured or incurred in the said enactment; or

(c) any penalty, forfeiture or punishment incurred in respect of any offence committed against the said enactment; or

(d) any investigation legal proceeding or remedy in respect of such right, previlege, obligation, liability, forfeiture or punishment as aforesaid and any such investigation, legal proceeding or remedy may be instituted, continued or enforced or any such penalty, forfeiture or punishment may be imposed as if the said enactment had not been repealed.

(4) Every officer and servant of the Bangalore Metropolitan Region Developmetn Authority other than such classes of servants as the government may by order specify shall become employees of the Bangalore Metropolitan Planning Committee and shall until other provisions are made receive the salary, allowances and be subject to the conditions of service which they were entitled immediately before the Constitution of the Bangalore Metropolitan Planning Committee.

(5) All assets and liabilites, of, and all contracts made by or on behalf of the Bangalore Metropolitan Region Development Authority immediately before the date of Constitution of the Bangalore Metropolitan Planning Committee and subsisting on that date shall stand transferred to the Bangalore Metropolitan Planning Committee.

**xxx** **xxx** **xxx**